ಇ) ಈ ನೀರಾವರಿ ಯೋಜನೆಯ ಅಡಿಯಲ್ಲಿ ಲಿಫ್ಟ್ ಮಾಡಿ ಯಾವ ಯಾವ ಹಳ್ಳಿಗಳಿಗೆ ಹಾಗೂ ಎಷ್ಟು ಎಕರೆ ನೀರಾವರಿಯಾಗುವುದು; ಈ ಕೆಲಸ ಈಗ ಯಾವ ಹಂತದಲ್ಲಿದೆ?

ಶ್ರೀ ಹೆಚ್.ಕೆ.ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) ಮಾರ್ಕಂಡೇಯ ಜಲಾಶಯ ಯೋಜನೆಯ ರೂ.120 ಕೋಟಿ ಮೊತ್ತದ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಯೋಜನೆಯಿಂದ 19,105 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು. ಈ ಯೋಜನೆಗೆ ಇದುವರೆಗೆ ರೂ. 125.48 ಕೋಟಿ ವೆಚ್ಚ ಮಾಡಲಾಗಿದೆ.

ಆ) ಈ ಯೋಜನೆಯಿಂದ ನೀರಾವರಿ ಸೌಲಭ್ಯ ಪಡೆಯುವ ಗ್ರಾಮಗಳ ವಿವರ ಈ ಕೆಳಗಿನಂತಿದೆ.

ಹುಕ್ಕೇರಿ ತಾಲ್ಲೂಕು:-

ಶಿರೂರು, ಹಗೆದಾಳ, ಬಸಾಪುರ, ಕರಗುಪ್ಪಿ, ಯಲ್ಲಾಪುರ, ಬನ್ನಿಬಾಗಿ ಮತ್ತು ಬಗರನಾಳ.

ಬೆಳಗಾವಿ ತಾಲ್ಲೂಕು:-

ಹುದ್ಲಿ, ರಾಮಾಪುರ, ಮಜ್ರೆ ತುಮ್ಮರಗುದ್ದಿ ಮತ್ತು ಹರಕೊಳ್ಳ.

ಗೋಕಾಕ ತಾಲ್ಲೂಕು:-

ಸುಲಧಾಳ, ಗುಜನಾಳ, ಬೂದಿಹಾಲ, ಯದ್ದಲಗುಡ್ಡ, ಅಂಕಲಗಿ,(ಲಗಮೇಶ್ವರ), ಮಲ್ಲಾಪುರ, ಮುಸಲಮರಿ, ಅಕ್ಕತಂಗೇರಹಾಳ, ಮಡಪಾಳ, ಅರಭಾರವಿ-ದೇವಲಹಟ್ಟಿ, ದಾಸನಟ್ಟಿ, ಕುಂದರಗಿ, ಗಡ್ಡಿಹೊಳಿ, ಸಿಗಿಹೋಳಿ, ಬೆಂಚಿನಮರಡಿ (ಉರುಬಿನಹಟ್ಟಿ), ತವಗ (ಕನಸಗೇರಿ), ಕೊಳವಿ, ಶಿಲ್ತಿಭಾವಿ, ಪುದಲಕಟ್ಟಿ, ಮಕ್ಕಳಗೇರಿ, (ಹಿರೇಹಟ್ಟಿ) ಜಮನಾಳ, ಪಂಜನಹಟ್ಟಿ (ಕನಗಾವ) ಮತ್ತು ಖನಗಾಂವ.

ಸವದತ್ತಿ ತಾಲ್ಲೂಕು:-

ಚಿಕ್ಕಬುದನೂರ, ಹಿರೇಬುದನೂರ, ಮಳಗಳಿ, ಕಡಬಿ, ಕೋಟುರ, ಯರಜರವಿ, ಶಿವಾಪುರ, ಮದಮಗೇರಿ, ಗೊರಗುದ್ದಿ ಮತ್ತು ಯರಗನವಿ

ಇ) ಮೂಲ ಯೋಜನೆಯಡಿಯಲ್ಲಿ ಯಾವುದೇ ಏತ ನೀರಾವರಿ ಯೋಜನೆಗಳು ಸೇರಿರುವುದಿಲ್ಲ. ಆದರೆ ರೈತ ಪ್ರತಿನಿಧಿಗಳ ಮತ್ತು ಜನ ಪ್ರತಿನಿಧಿಗಳ ಒತ್ತಾಯದ ಮೇರೆಗೆ ಎರಡು ಏತ ನೀರಾವರಿ ಯೋಜನೆಗಳನ್ನು ಚಚಡಿ ಮತ್ತು ಮುರಗೋಡದಲ್ಲಿ ತೆಗೆದುಕೊಳ್ಳಲು ಸರ್ವೆ ಕೆಲಸ ಪ್ರಗತಿಯಲ್ಲಿದೆ.

ಉತ್ತರ ಕರ್ನಾಟಕದಲ್ಲಿ ತೋಟಗಾರಿಕೆ ಫಸಲನ್ನು ಬೆಳೆಯಲು ವಿಶೇಷ ಸಹಾಯ

731(894) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕರ್ನಾಟಕದಲ್ಲಿ ತೋಟಗಾರಿಕೆ ಇಲಾಖೆಯ ಫಸಲನ್ನು ಹಾಗೂ ಹೂ ಹಣ್ಣುಗಳನ್ನು ಬೆಳೆಯಲು ಅನುಕೂಲಕರವಾದ ಹವಾಗುಣ ಹಾಗೂ ಎಲ್ಲಾ ಸೌಕರ್ಯಗಳು ಇರುವುದರಿಂದ ಇಲ್ಲಿ ಈ ಫಸಲನ್ನು ಬೆಳೆಯಲು ವಿಶೇಷವಾದ ಕ್ರಮವನ್ನು ಹಾಕಿಕೊಳ್ಳಲಾಗುವುದೆ?

ಆ) ಮಹಾರಾಷ್ಟ್ರ ರಾಜ್ಯದಲ್ಲಿ ರೈತರಿಗೆ ತೋಟಗಾರಿಕೆ ಫಸಲನ್ನು ಬೆಳೆಯಲು ವಿಶೇಷವಾದ ಸಹಾಯ ಮಾಡುತ್ತಿರುವಂತೆ ಬೆಳಗಾವಿ ಜಿಲ್ಲೆಯಲ್ಲಿಯೂ ಸಹ ವಿಶೇಷವಾದ ಸಹಾಯವನ್ನು ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ಹಾಗೂ ಯಾವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು) :

ಅ) ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳನ್ನು ಅಭಿವೃದ್ಧಿ ಪಡಿಸಲು ಇಲಾಖೆಯು ಇತರೆ ಭಾಗಗಳಂತೆ ಉತ್ತರ ಕರ್ನಾಟಕದಲ್ಲಿಯು ಸಹ ಹಲವಾರು ಯೋಜನೆಗಳನ್ನು ಈಗಾಗಲೇ ಅನುಷ್ಠಾನಗೊಳಿಸುತ್ತದೆ.

ಆ) ಬೆಳಗಾವಿ ಜಿಲ್ಲೆಯಲ್ಲೆ ಸರ್ವತೋಮುಖ ತೋಟಗಾರಿಕೆ ಅಭಿವೃದ್ಧಿಗಾಗಿ ಈಗಾಗಲೆ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆ ಕಾರ್ಯಕ್ರಮಗಳ ವಿವರಗಳು ಕೆಳಕಂಡಂತಿರುತ್ತದೆ.

1. ಕೇಂದ್ರ ಪುರಸ್ಕೃತ ಉಷ್ಣ ಮತ್ತು ಶುಷ್ಕವಲಯ ಹಣ್ಣುಗಳ ಅಭಿವೃದ್ಧಿ ಯೋಜನೆಯಡಿ:

ಎ) ವಿವಿಧ ಜಾತಿಯ ಹಣ್ಣುಗಳ ಪ್ರದೇಶ ವಿಸ್ತರಣೆ ಮಾಡಲು ಒಬ್ಬ ರೈತರಿಗೆ ಒಂದು ಎಕರೆಗೆ ಬೇಕಾಗುವಷ್ಟು ಹಣ್ಣಿನ ಗಿಡಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

ಬಿ) ಖಾಸಗಿ ನರ್ಸರಿದಾರರಿಗೆ ರೂ. 2.00 ಲಕ್ಷದವರೆಗೆ ಧನ ಸಹಾಯ ನೀಡಲಾಗುತ್ತಿದೆ.

ಸಿ) ಕ್ಷೇತ್ರ ಹಂತದಲ್ಲಿ ಹಣ್ಣುಗಳ ಕೊಯ್ಲೋತ್ತರ ನಿರ್ವಹಣೆಗಾಗಿ ಪ್ಲಾಸ್ಟಿಕ್ ಕ್ರೇಟ್‌ಗಳನ್ನು ವಿತರಣೆ ಮಾಡಲಾಗುತ್ತಿದೆ.

ಡಿ) ದ್ರಾಕ್ಷಿ ಅಭಿವೃದ್ಧಿಗಾಗಿ ಸಂಸ್ಕರಣ ಘಟಕ, ಪ್ರಿ ಕೂಲಿಂಗ್ ಯೂನಿಟ್ ಸ್ಥಾಪನೆಗಾಗಿ ಧನ ಸಹಾಯ ನೀಡಲಾಗುತ್ತಿದೆ.

ಇ) ಉತ್ಕೃಷ್ಟ ಗುಣಮಟ್ಟದ ಹಣ್ಣಿನ ಬೆಳೆಗಳ ನಾಟಿ ಮಾಡುವ ಕಸಿ:ಸಸಿಗಳನ್ನು ಉತ್ಪಾದಿಸಿ ರೈತರಿಗೆ ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ.

2. ಕೇಂದ್ರ ಪುರಸ್ಕೃತ ಯೋಜನೆಯಾದ ತರಕಾರಿ ಬೆಳೆಗಳ ಅಭಿವೃದ್ಧಿ ಯೋಜನೆಯಡಿ ರೈತರಿಗೆ ಉತ್ತಮ ತರಕಾರಿ ಬೀಜಗಳನ್ನು ಕಿರುಚೀಲ ರೂಪದಲ್ಲಿ ನೀಡಲಾಗುತ್ತಿದೆ.

3. ಕೇಂದ್ರ ಪುರಸ್ಕೃತ ಯೋಜನೆಗಳಡಿಯಲ್ಲಿ ಕೋಕೋ, ಗೇರು, ಔಷಧಿ ಮತ್ತು ಸುಗಂಧ ದ್ರವ್ಯ ಬೆಳೆಗಳು ಹಾಗೂ ವಾಣಿಜ್ಯ ಪುಷ್ಪಾಭಿವೃದ್ಧಿಯ ಅಡಿಯಲ್ಲಿ ಪ್ರದೇಶ ವಿಸ್ತರಣೆಗಾಗಿ ರೈತರಿಗೆ ಉಚಿತವಾಗಿ ಉತ್ತಮ ಕಸಿ:ಸಸಿಗಳನ್ನು ನೀಡಲಾಗುತ್ತಿದೆ.

4. ಕೇಂದ್ರ ಪುರಸ್ಕೃತ ಕೃಷಿಯಲ್ಲಿ ಪ್ಲಾಸ್ಟಿಕ್ ಬಳಕೆ ಯೋಜನೆಯಡಿ ಹನಿ ನೀರಾವರಿಗಾಗಿ 50 ಮತ್ತು 35 ಶೇಕಡ ರಿಯಾಯಿತಿ ನೀಡಲಾಗುತ್ತಿದೆ.

5. ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಅಣಬೆ ಅಭಿವೃದ್ಧಿಗಾಗಿ ಸಹಾಯಧನ ನೀಡಲಾಗುತ್ತಿದೆ.

6. ಕೇಂದ್ರ ಪುರಸ್ಕೃತ ಸಾಂಬಾರು ಬೆಳೆಗಳಾದ ಮೆಣಸು, ಶುಂಠಿ, ಅರಿಶಿನ, ಮೆಣಸಿನಕಾಯಿ ಹಾಗೂ ವೆನಿಲ್ಲಾ ಬೆಳೆಗಳ ಪ್ರದೇಶ ವಿಸ್ತರಣೆ ಮತ್ತು ಇತರೆ ಸವಲತ್ತುಗಳನ್ನು ನೀಡಲಾಗುತ್ತಿದೆ.

7. ರಾಷ್ಟ್ರೀಯ ತೋಟಗಾರಿಕೆ ಮಂಡಳಿ ವತಿಯಿಂದ ರೈತರಿಗೆ ಗ್ರಾಮೀಣ ಪ್ರದೇಶದಲ್ಲಿ ಪೌಷ್ಟಿಕ ತೋಟಗಳನ್ನು ಸ್ಥಾಪಿಸಲು ಹಣ್ಣಿನ ಕಸಿಗಳನ್ನು ನೀಡಲಾಗುತ್ತಿದೆ.

8. ತೋಟಗಾರಿಕೆ ಬೆಳೆಗಳಲ್ಲಿ ಕೀಟ:ರೋಗಗಳ ಸಮಗ್ರ ನಿಯಂತ್ರಣಕ್ಕಾಗಿ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣೆ ಔಷಧಿಗಳನ್ನು ನೀಡಲಾಗುತ್ತಿದೆ.

9. ತೆಂಗು ಅಭಿವೃದ್ಧಿ ಮಂಡಳಿಯ ಸಹಾಯದಲ್ಲಿ ತೆಂಗು ಉತ್ಪಾದಕತೆ ಅಭಿವೃದ್ಧಿಯ ಸಮಗ್ರ ಯೋಜನೆಯಡಿ ತೆಂಗು ಅಭಿವೃದ್ಧಿಪಡಿಸಲಾಗುತ್ತಿದೆ.

10. ಗಿರಿಜನ ಉಪಯೋಜನೆಯಡಿ ಗಿಡಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

11. ವಿಶೇಷ ಘಟಕ ಯೋಜನೆಯಡಿ ತೋಟಗಾರಿಕೆ ಗಿಡಗಳನ್ನು ನೀಡಲಾಗುತ್ತಿದೆ.(ಉಚಿತವಾಗಿ)

12. ಶೈತ್ಯಾಗಾರ ಸಹಾಯಧನ ಯೋಜನೆಯಡಿ ವಿದ್ಯುತ್‌ಚ್ಛಕ್ತಿಯ ಒಂದು ಯೂನಿಟ್‌ಗೆ ಒಂದು ರೂ.ನಂತೆ ಸಬ್ಸಿಡಿ ನೀಡಲಾಗುತ್ತಿದೆ.

ತುರುವೇಕೆರೆ ತಾಲ್ಲೂಕು ತುಯಲಹಳ್ಳಿ ಪಾಳ್ಯದಲ್ಲಿ ಅಂಗನವಾಡಿ ಕೇಂದ್ರ ಪ್ರಾರಂಭ.

734(579) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುರುವೇಕೆರೆ ತಾಲ್ಲೂಕು ಮಾಯಸಂದ್ರ ಹೋಬಳಿ ತುಯಲಹಳ್ಳಿ ಪಾಳ್ಯದಲ್ಲಿ ಅಂಗನವಾಡಿ ಕೇಂದ್ರ ನಡೆಯುತ್ತಿದೆಯೇ?

ಆ) ತುಯಲಹಳ್ಳಿಯಲ್ಲಿರುವ ಮಕ್ಕಳ ಸಂಖ್ಯೆ ಎಷ್ಟು?

ಇ) ಮಕ್ಕಳು ಜಾಸ್ತಿ ಇರುವ ಕಡೆ ಅಂಗನವಾಡಿ ಕೇಂದ್ರಗಳನ್ನು ನಡೆಸಬೇಕೆಂಬ ಸರ್ಕಾರದ ನೀತಿ ಇದೆಯೇ?

ಈ) ಹಾಗಿದ್ದಲ್ಲಿ, ಸರಿಯಾದ ವ್ಯವಸ್ಥೆಯಿಂದ ಇಲ್ಲಿ ಕೇಂದ್ರ ನಡೆಸಲಾಗುವುದೆ?

ಉ) ಮಕ್ಕಳ ಹಿತದೃಷ್ಟಿಯಿಂದ ಅಂಗನವಾಡಿ ಕೇಂದ್ರ ಇಲ್ಲಿ ಪ್ರಾರಂಭಿಸಲಾಗುವುದೆ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಕಲ್ಯಾಣ ಸಚಿವರು) :

ಅ) ಇಲ್ಲ.

ಆ) ತುಯಲಹಳ್ಳಿಯಲ್ಲಿರುವ ಮಕ್ಕಳ ಸಂಖ್ಯೆ18.

ಇ) ಇದೆ.